# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ

ಎಸ್.ಸಿ. ನಂ. 62/2025

ಪಿಡಬ್ಲ್ಯೂ: 04
ಸಿಡಬ್ಲ್ಯೂ: 09

**ದಿನಾಂಕ: 24-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು | : ಪವನ್ ಕುಮಾರ್ |
| ತಂದೆಯ ಹೆಸರು | : ಲಕ್ಷ್ಮಣಬಾಬು |
| ವಯಸ್ಸು | : 17 ವರ್ಷ |
| ಉದ್ಯೋಗ | : ಮನೆಗೆಲಸ |
| ವಾಸ ಸ್ಥಳ | : ಮೊಳಕಾಲ್ಮೂರು |

**ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರವರಿಂದ:**

ಪ್ರಾಸಾ–**1** ನನ್ನ ತಾಯಿ. ಚಂದ್ರುಶೇಖರ್ ನನ್ನ ಅಣ್ಣ. ಆರೋಪಿ ನನ್ನ ತಂದೆ. ನನ್ನ ಸದರಿ ಅಣ್ಣ ಈಗ ಜೀವಂತವಿಲ್ಲ. ಆತ ನೀರಿನ ಮೇಲೆ ಕಾಲಿಟ್ಟು ಜಾರಿ ಕತ್ತರಿ ಮೇಲೆ ಬಿದ್ದಿದ್ದರಿಂದ ಆತನ ಕುತ್ತಿಗೆ ಭಾಗದಿಂದ ರಕ್ತ ಬಂತು, ಆದರಿಂದಾಗಿ ಆತನನ್ನು ಮೊಳಕಾಲ್ಮೂರಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿದ್ದು ಅಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ನಂತರ ಬಳ್ಳಾರಿಯ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಮಾರ್ಗಮದ್ಯದಲ್ಲಿ ಆತ ತೀರಿಕೊಂಡ. ಸದರಿ ಘಟನೆಯಾಗಿ ಈಗಾಗಲೇ ಮೂರು ವರ್ಷಗಳಾಗಿವೆ. ಆ ದಿನ ನಾನು ಆಟವಾಡಲು ಸಂಧ್ಯಾಭವನ ಎಂಬ ಸ್ಥಳಕ್ಕೆ ಹೋಗಿದ್ದೆ. ಆಗ ನನ್ನ ತಾಯಿ ಹಾಗೂ ನನ್ನ ಅಣ್ಣ ಮನೆಯಲ್ಲಿದ್ದರು. ನಮ್ಮ ತಂದೆ ಅಂದರೆ ಆರೋಪಿ ಆಸ್ಪತ್ರೆಗೆ ಹೋಗಿದ್ದರು. ನನ್ನ ಸದರಿ ಅಣ್ಣ ಹೇಗೆ ತೀರಿಕೊಂಡಿದ್ದಾನೆಂದು ತನಿಖಾಧಿಕಾರಿಗೆ ಹೇಳಿಕೆ ನೀಡಿಲ್ಲ. ಆ ದಿನ ನನ್ನ ಅಣ್ಣನ ಕುತ್ತಿಗೆಗೆ ಗಾಯಪಡಿಸಿದಂತಹ ಕತ್ತರಿಯನ್ನು ನೋಡಿದರೆ ಗುರುತಿಸಬಲ್ಲೆ, ಅದನ್ನು ನೋಡುತ್ತಿದ್ದು ಸದರಿ ಕತ್ತರಿಯನ್ನು ಈಗಾಗಲೇ ಮುದ್ದೆ ಮಾಲು **1** ಎಂದು ಗುರುತಿಸಲಾಗಿದೆ. ಘಟನೆ ನಡೆದಾಗ ರಾತ್ರಿ **8.00** ಗಂಟೆಯಾಗಿತ್ತು.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲು: ಮಾನ್ಯ ಸರ್ಕಾರಿ ಅಭಿಯೋಜಕರವರಿಂದ:**

**2.** ನಮ್ಮ ಮನೆಯ ಹಾಲ್ ನಲ್ಲಿ ಟಿವಿ ಇದೆ ಎನ್ನುವುದು ನಿಜ. ಆ ದಿನ ನನ್ನ ಅಣ್ಣ ಟಿವಿಯಲ್ಲಿ ಕ್ರಿಕೇಟ್ ನೋಡುತ್ತಿದ್ದ ಎನ್ನುವುದು ನಿಜ. ಆದರೆ ನನಗೆ ಗೊಂಬೆ ಚಾನಲ್ ನೋಡುವ ಹವ್ಯಾಸವಿದ್ದು ಆ ಕಾರಣ ಆ ಚಾನಲ್ ನೋಡುತ್ತೇನೆ ರಿಮೋಟ್ ಕೊಡು ಎಂದು ನಾನು ನನ್ನ ಅಣ್ಣನಿಗೆ ಕೇಳಿದೆ ಆತ ಕೊಡದೇ ಇದ್ದ ಕಾರಣ ಅದನ್ನು ಕಸಿದುಕೊಳ್ಳಲು ಹೋದಾಗ ನಾವಿಬ್ಬರು ಕಚ್ಚಾಡುವುದನ್ನು ನೋಡಿ ಆರೋಪಿ

ನಮ್ಮಿಬ್ಬರಿಗೂ ಗದರಿಸಿದ್ದು ಆ ಘಟನೆಯಲ್ಲಿ ಆರೋಪಿ ಮನೆಯಲ್ಲಿದ್ದ ಬಟ್ಟೆ ಕತ್ತರಿಸುವ ಕತ್ತರಿಯನ್ನು ತೆಗೆದುಕೊಂಡು ನನ್ನ ಅಣ್ಣನ ಕಡೆಗೆ ಎಸೆದಿದ್ದು ಅದು ಆತನ ಬಲಗಡೆ ಕುತ್ತಿಗೆಗೆ ಸಿಕ್ಕಿಕೊಂಡು ಆತ ಕಿರುಚಾಡಿದ್ದು ಕೂಡಲೇ ನಮ್ಮ ತಾಯಿ ಮನೆಯ ಒಳಗಿನಿಂದ ಹಾಲ್ ಗೆ ಬಂದಿದ್ದು ನನ್ನ ಅಣ್ಣನನ್ನು ತಕ್ಷಣವೇ ಮೊಳಕಾಲ್ಮೂರು ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿದೆವು ಎನ್ನುವುದು ಸರಿಯಲ್ಲ. ನೀರಿನ ಮೇಲೆ ಕಾಲಿಟ್ಟು ನನ್ನ ಅಣ್ಣ ಜಾರಿ ಬಿದಿದ್ದಾನೆಂದು ನಾನು ತನಿಖಾಧಿಕಾರಿಗೆ ಹೇಳಿಲ್ಲ ಎಂದರೆ ಅವರಿಗೆ ನಾನು ಹೇಳಿಕೆ ಕೊಟ್ಟಿಲ್ಲ. ಆ ದಿನ ನಮ್ಮ ತಂದೆ ಕತ್ತರಿಯನ್ನು ನನ್ನ ಅಣ್ಣನ ಕೆಡೆಗೆ ಎಸೆದಿದ್ದು ಅದರಿಂದ ಆತನ ಕುತ್ತಿಗೆಗೆ ಅದು ಸಿಕ್ಕಿಕೊಂಡು ಆತ ರಕ್ತಗಾವಾಗಿದ್ದು ಗೊತ್ತಿದ್ದಾಗ್ಯೂ ಕೂಡಾ ಆತ ನೀರಿನ ಮೇಲೆ ಕಾಲಿಟ್ಟು ಜಾರಿ ಬಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ತನಿಖಾಧಿಕಾರಿಗೆ ಈ ಮೇಲೆ ಸೂಚಿಸಿದಂತೆ ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಹೇಳಿಕೆಯ ಭಾಗವನ್ನು ನಿಪಿ–**5** ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು: ಶ್ರೀ ಡಿ.ಎಂ.ಬಿ. ವಕೀಲರಿಂದ ಆರೋಪಿತನ ಪರವಾಗಿ:</u>**

**3.** ಈ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖಾಧಿಕಾರಿ ನನ್ನನ್ನು ವಿಚಾರಣೆ ಮಾಡಿಲ್ಲ ಎನ್ನುವುದು ನಿಜ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.